ಹೋದರೆ ಗಂಡು ಹೊರಗೆ ಕಾವಲು ಕಾಯುತ್ತಿತ್ತು. ಅವು ನಮ್ಮ ಒಕ್ಕಲಿಗೆ ಮೊದಲೇ ಗೃಹಪ್ರವೇಶ ಮಾಡಿ ಸಂಸಾರ ಹೂಡಿದವು. ಮರಿಗಳ ಪುಕ್ಕ ಬಲಿತೊಡನೆ ಗೂಡನ್ನು ಅನಾಥಗೊಳಿಸಿ ನೀಲಾಗಸದಲ್ಲಿ ಹಾರಿಹೋದವು. ಎಂಥ ನಿರಾಳತೆ! ಅಸೂಯೆಯಾಯಿತು.

ಎರಡು: ಕಾಮಗಾರಿ ಮುಗಿಯುತ್ತ ಬರಲು ಶೆಡ್ಡನ್ನು ಕೆಡವಬೇಕಾಯಿತು. ಖುಷ್ಕಿ ಜಮೀನಿನಲ್ಲಿ ಪೀಕು ತೆಗೆಯಲಾಗದೆ ಬಸವಳಿದ ಯಲಬುರ್ಗ ಸೀಮೆಯ ಸಣ್ಣರೈತನೊಬ್ಬ, ವಾಚ್‌ಮನ್ನಾಗಿ ಸೇರಿಕೊಂಡಿದ್ದ. ಅವನ ಹೆಂಡತಿ ಬೇಲ್ದಾರರಿಗೆ ಮಾಲು–ಇಟ್ಟಿಗೆ ಎತ್ತಿಕೊಡುತ್ತಿದ್ದಳು. ಶೆಡ್ಡಿನಮನೆ ತಾತ್ಕಾಲಿಕವೆಂದು ಗೊತ್ತಿದ್ದರೂ ದಂಪತಿ ತಳಮಳವಿಲ್ಲದಂತೆ ಇದ್ದರು. ಕೊನೆಯ ಲೆಕ್ಕ ಚುಕ್ತಮಾಡಿದೆ. ತಳ್ಳುಗಾಡಿಯಲ್ಲಿ ಸಾಮಾನು ಹೇರಿಕೊಂಡು ಇನ್ನೊಂದು ಮನೆಕಟ್ಟುವ ಜಾಗಕ್ಕೆ ಹೋದರು. ಆಗ ಅವರಲ್ಲಿದ್ದ ಭಾವ ಯಾವುದು? ಗೂಡು ತ್ಯಜಿಸಿದ ಬಳಿಕ ಮರಳಿ ಬಂದು ಸಂಸಾರ ಹೂಡದ ಪಕ್ಷಿದಂಪತಿಯ ಸಹಜ ಪ್ರವೃತ್ತಿಯೇ? ಗೊಂದಲವಾಯಿತು.

ಮೂರು: ಕಟ್ಟಡದ ಕೆಲಸಗಾರರ ಮನೆ ಹುಡುಕಿ ಹೋಗಿದ್ದು. ಮನೆಗೆ ಇಳಿದುಕೊಳ್ಳುವ ಮುನ್ನ ಕೆಲಸಗಾರರಿಗೆ ಬಿರಿಯಾನಿ ಹಾಕಲು ನಿರ್ಧರಿಸಿದೆವು. ಕುಮಾರ, ಹಸೀನಕ್ಕ, ಜುಬೇರ್, ರತ್ನಕ್ಕ, ಮಾಚ, ಜಂಬಯ್ಯ, ಓಬಯ್ಯ, ಪೊಂಪ ಇವರು ಕೆಲಸದ ಹೊತ್ತಲ್ಲಿ ಬೈದಾಡುತ್ತಿದ್ದರು. ತಮಾಶೆ ಮಾಡಿಕೊಂಡು ನಗುತ್ತಿದ್ದರು. ಬುತ್ತಿ ಹಂಚಿಕೊಂಡು ತಿನ್ನುತ್ತಿದ್ದರು. ಆದರೀಗ ಈಗ ನಮ್ಮನ್ನು ಮರೆತೇಬಿಟ್ಟವರಂತೆ ಬೇರೊಂದು ಕಟ್ಟಡದಲ್ಲಿ ತನ್ಮಯವಾಗಿ ತೊಡಗಿಕೊಂಡಿದ್ದರು. ತಟ್ಟಿಗೋಡೆ ತಗಡಹೊದಿಕೆ ಗೋಣಿಪರದೆಯೇ ಕದವಾಗಿದ್ದ ಅವರ ಬಿಡಾರಗಳು, ಕೆನಾಲ ದಡದಲ್ಲಿಯೂ ಗುಡ್ಡದ ಓರೆಯಲ್ಲಿಯೂ ಊರಕಸ ಸುರಿವಲ್ಲಿಯೂ ಕೊಳಚೆ ನೀರು ನಿಲ್ಲುವಲ್ಲಿಯೂ ಸ್ಥಾಪಿತವಾಗಿದ್ದವು. ನಾನು ಹೋದಾಗ ಕುಶಲ ಕೆಲಸಗಾರನಾಗಿದ್ದ ರಾಜಣ್ಣ, ಗ್ಲಾಸಿನ ತುಂಬ ಬೀರು ಹೊಯ್ದುಕೊಂಡು, ತಟ್ಟೆಯಲ್ಲಿದ್ದ ದೊಡ್ಡದೊಂದು ಅನ್ನದ ಹೆಂಟೆಯ ಮೇಲೆ ಮೀನುಸಾರು ಸುರಿದುಕೊಂಡು, ಮಡದಿ ಮಕ್ಕಳ ಜತೆ ಊಟಕ್ಕೆ ಕುಳಿತಿದ್ದವನು, 'ಬಾ ಧಣಿ ಉಂಬಾನ. ಹೇಳಿ ಕಳಿಸಿದ್ರೆ ನಾನೇ ಬರತಿದ್ನಲ್ಲಾ' ಎಂದು ಗಲಿಬಿಲಿಗೊಂಡು ಸ್ವಾಗತಿಸಿದನು. ತಾತ್ಕಾಲಿಕ ಮನೆಗಳಲ್ಲಿ ಅಂದಂದಿಗೇ ಬದುಕುತ್ತಿರುವ ಇವರನ್ನು ನೋಡುವಾಗ, ಸ್ವಂತಮನೆ ನಿರ್ಮಿಸಿಕೊಂಡು ಅಸುಖದಿಂದ ನರಳುತ್ತಿದ್ದ ಮಧ್ಯಮವರ್ಗದ ಖಿನ್ನವದನಗಳು ನೆನಪಾದವು. ಕಟ್ಟಡ ನಮ್ಮ ಸೊತ್ತಾಗಿರಬಹುದು. ಆದರದು ಮನೆಯಾಗಿ ನಮ್ಮದಾಗದಿದ್ದರೆ ಉಸಿರುಗಟ್ಟಿಸುತ್ತದೆ. ನೆಮ್ಮದಿ ಕೊಡುವ ಮನೆಯ ಗುಣಗಳು ಕಟ್ಟಡದ ಭೌತಿಕ ಸೌಲಭ್ಯಗಳಲ್ಲಲ್ಲ, ಬಾಳುವವರ ಮನೋಭಾವದಲ್ಲಿರುತ್ತವೆ. ಹಾಗೆಂದು ಯಾರದೊ ಜಾಗದಲ್ಲಿ ಬಗೈರ್ ಹುಕುಂ ಕಟ್ಟಿಕೊಂಡ ಜೋಪಡಿಗಳಲ್ಲಿದ್ದು, ಅದ್ದರಿಸಿದರೆ ಕಿತ್ತುಕೊಂಡು ಹೋಗಲು ಸಿದ್ಧವಾಗಿಯೇ ಬದುಕುವವರ ನೆಮ್ಮದಿ ಸರಳತೆಗಳನ್ನು ವೈಭವೀಕರಿಸುವುದು ಉಚಿತವೇ? ತಮಗೂ ಎಲ್ಲರಂತೆ ಸ್ವಂತ ಮನೆಯೊಂದು ಇರಬೇಕು ಎಂಬ ಆಸೆಯಿಟ್ಟುಕೊಂಡ ನಾಡಿನ ಅಸಂಖ್ಯ ಮನೆವಿಹೀನರ ನಿದ್ದೆಯಲ್ಲಿ ಬೀಳುತ್ತಿರುವ ಕನಸುಗಳು ಹೇಗಿರಬಹುದು? ಕಟ್ಟಿದ ಮನೆಗಳಿಗಿಂತ ಕಟ್ಟಬೇಕಾಗಿರುವ ಕಲ್ಪಿತ ಮನೆಗಳ ಸಹಸ್ರಾರು ರೂಪರೇಖೆಗಳು ನನ್ನ ಮನೋಪರದೆಯ ಮೇಲೆ ಹಾಯತೊಡಗಿದವು. ಗೃಹಪ್ರವೇಶ ಮಾಡುವ ನಮ್ಮ ಸಂಭ್ರಮ ಅರ್ಧಕ್ಕರ್ಧ ಇಳಿದುಹೋಯಿತು.

ಭಂಡಬಿದ್ದು ಮನೆಗೆ ಇಳಿದುಕೊಂಡೆವು. ನಿರ್ಜೀವ ಸರಕುಗಳಿಂದ ರೂಪುಗೊಂಡ ಕಟ್ಟಡ,